ತರಬಯಸುತ್ತೇನೆ. ಇದೊಂದು new technology ಏನೆಂದರೆ, ಆ ಸ್ಟೀಲ್ ಫ್ಯಾಕ್ಟರಿಯಿಂದ ಬರತಕ್ಕಂಥ ಆವಿ ಏನಿತ್ತು, ಅದನ್ನು ಕನ್ವರ್ಟ್ ಮಾಡಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಬೇಕೆಂದು ತೀರ್ಮಾನ ಮಾಡಿ ಈಗಾಗಲೇ ತಯಾರು ಮಾಡುತ್ತಿದ್ದಾರೆ. ಈ ರೀತಿ new technology ಇರತಕ್ಕಂಥ ಯಾವ ಫ್ಯಾಕ್ಟರಿಗಳು ನಮ್ಮ ಕರ್ನಾಟಕದಲ್ಲಿ ಇಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ಹಾಗಾಗಿ ಇದಕ್ಕೆ ಆದ್ಯತೆ ಮೇಲೆ ನಿಮ್ಮ ಪಾಲಿಸಿ ಮತ್ತು ನಿಮ್ಮ ತೀರ್ಮಾನ ಅದೇ ಆಗಿರಬೇಕಾದಾಗ ಇದನ್ನು ಕೊಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ. ಈಗ ಏನಾಗಿದೆ ಎಂದರೆ, ಆ ಫ್ಯಾಕ್ಟರಿ ನಿಂತು ಹೋಗಿದೆ. ಏರಿಯಾಗಳು ಇಲ್ಲದಿರುವಾಗ ಫ್ಯಾಕ್ಟರಿಗಳು ನಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. 4 ವರ್ಷದಿಂದ ಪ್ರಯತ್ನ ಪಡುತ್ತಿದ್ದಾರೆ, ಇದುವರೆಗೂ ಮಂಜೂರಾತಿ ಆಗಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ಕೈಗಾರಿಕೆಯ ದೃಷ್ಟಿಯಿಂದ ಮತ್ತು ನಮ್ಮ ಹಿಂದುಳಿದ ತಾಲ್ಲೂಕಿನ ಹಿತದೃಷ್ಟಿಯಿಂದ ಅದನ್ನು ಪರಿಗಣಿಸಬೇಕು. ಪಾಸಿಟಿವ್ ಆಗಿ ರೆಸ್ಪಾನ್ಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಪಾಲಿಸಿಯೂ ಅದೇ ಆಗಿರುವುದರಿಂದ ಇದನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಆ) ವಿಷಯ : ವಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ.

ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ವಿಜಾಪುರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 2009–10ರ ಆಯವ್ಯಯ ಘೋಷಣೆಯಂತೆ ಬಿಜಾಪುರ ಜಿಲ್ಲೆಯನ್ನು ಕನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ (KUIDFC) ರವರು

Integrated Dringking Water Supply Project ಅಡಿಯಲ್ಲಿ ಪ್ರಾಯೋಗಿಕ ಯೋಜನೆಗಾಗಿ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಅನುಕೂಲವಾಗುವಂತೆ, ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಈಗಾಗಲೇ ಗೊತ್ತುಪಡಿಸಲಾದ ಸಮಾಲೋಚಕ ಸಂಸ್ಥೆ ಮುಖೇನ ರೂಪಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿ, ರಾಜ್ಯ ಮತ್ತು ಕೇಂದ್ರ ವಲಯಗಳಡಿ 2010–11ರ ಸಾಲಿನಲ್ಲಿ, ಉಳಿದ ಜನವಸತಿಗಳನ್ನು ಆವರಿಸಲು ಅಗತ್ಯವಿರುವ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗುವುದು.

ವಿಜಾಪುರ ಜಿಲ್ಲೆಯಲ್ಲಿ 1050 ಗ್ರಾಮೀಣ ಜನವಸತಿಗಳಿವೆ. ಸಮರ್ಪಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆಗೆ ಪ್ರಾರಂಭದಿಂದ ಇಲ್ಲಿಯವರೆಗೆ 615 ನಳ ನೀರು ಸರಬರಾಜು ಯೋಜನೆಗಳು (PWS). 766 ಕಿರು ನೀರು ಸರಬರಾಜು ಯೋಜನೆಗಳು (MWS), 5280 ಕೈಪಂಪು ಕೊಳವೆ ಬಾವಿ (HPBWLs) ಯೋಜನೆಗಳನ್ನು ಸ್ಥಾಪಿಸಲಾಗಿದೆ. ಇವುಗಳಿಂದ (FC) 581 ಜನವಸತಿಗಳಿಗೆ 40lpcdಗಿಂತ ಹೆಚ್ಚಿನ ನೀರು ಪೂರೈಕೆಯಾಗುತ್ತಿದೆ. (PC) 469 ಜನವಸತಿಗಳಿಗೆ 40lpcdಗಿಂತ ಕಡಿಮೆ ನೀರು ಪೂರೈಕೆಯಿದೆ. 573 ಜನವಸತಿಗಳು ಫ್ಲೋರೈಡ್, TDS ಮತ್ತು ಇತರೆ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿವೆ.

2009–10ರ ಸಾಲಿನಲ್ಲಿ ರಾಜ್ಯ ವಲಯದಡಿ ರೂ. 8.68 ಕೋಟಿ ಅನುದಾನ ಹಾಗೂ ಕೇಂದ್ರ ವಲಯದಡಿ ರೂ. 31.70 ಕೋಟಿ ಅನುದಾನ ಬಿಡುಗಡೆ ಸೇರಿದಂತೆ, ಒಟ್ಟು ರೂ. 40.38 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಪೈಕಿ ರೂ. 36.82 ಕೋಟಿ **ಜನವರಿ–10ರ** ಅಂತ್ಯಕ್ಕೆ ವೆಚ್ಚವಾಗಿದೆ.

ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆ ನಿವಾರಣೆಗೆ ಬಿಜಾಪುರ ಜಿಲ್ಲಾ ಪಂಚಾಯತಿಗೆ ಕೇಂದ್ರ ಪುರಸ್ಕೃತ ಸಬ್–ಮಿಷನ್ ಕಾರ್ಯಕ್ರಮದಡಿ ರೂ. 38.723 ಕೋಟಿ ಅಂದಾಜು ಮೊತ್ತದ 9–ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಒಂದು ಯೋಜನೆ ಪೂರ್ಣಗೊಳಿಸಿದ್ದು,

8–ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದಲ್ಲದೇ, ದಿ: 27.11.2008ರಂದು ಜರುಗಿದ SLEC ಸಭೆಯಲ್ಲಿ ರೂ. 57.00 ಕೋಟಿ ಅಂದಾಜು ವೆಚ್ಚದ 10–ಯೋಜನೆಗಳಿಗೆ ಅನುಮೋದನೆ ದೊರೆತಿದೆ. ಇದರಿಂದ, 70–ಜನವಸತಿಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. ಇದಲ್ಲದೇ, **ವಿದೇಶಿ ನೆರವಿನ ಯೋಜನೆಯಡಿ ರೂ.53.00 ಕೋಟಿ ಅಂದಾಜು ವೆಚ್ಚದಲ್ಲಿ 101–ಸಮಸ್ಯಾತ್ಮಕ** ಜನವಸತಿಗಳನ್ನು ಆವರಿಸಲು ಆದ್ಯತೆ ನೀಡಲಾಗುತ್ತಿದೆ.

2009–10ರ ಸಾಲಿನಲ್ಲಿ **ಅತಿವೃಷ್ಟಿ** ಸಂಬಂಧ, ವಿಜಾಪುರ ಜಿಲ್ಲೆಗೆ, **ಕುಡಿಯುವ ನೀರಿನ ಬಾಬ್ತಿಗೆ ರೂ. 0.90 ಕೋಟಿ ಅನಾವೃಷ್ಟಿ ಸಂಬಂಧ ರೂ. 0.50 ಕೋಟಿ** ಅನುದಾನವನ್ನು, ಕಂದಾಯ ಇಲಾಖೆ ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವ ಅನುದಾನ ಹೊರತು ಪಡಿಸಿ, ಬಿಡುಗಡೆ ಮಾಡಲಾಗಿದೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರವನ್ನು ನಾನು ಸಂಪೂರ್ಣವಾಗಿ ಗಮನಿಸಿದ್ದೇನೆ. ನಾನು ತಮ್ಮ ಅನುಮತಿಯ ಮೇರೆಗೆ ಬಿಜಾಪುರ ಜಿಲ್ಲೆಗೆ ಬಹಳ ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಬಹಳ ವರ್ಷಗಳಿಂದ ಅನುಭವಿಸುತ್ತಿದ್ದೇವೆ. ಇದಕ್ಕೆ ಎರಡು ಕಾರಣಗಳು ಇವೆ. ಆಲಮಟ್ಟಿ ಮತ್ತು ಕೃಷ್ಣಾ ನದಿಯಿಂದ ಬಿಜಾಪುರ ಜಿಲ್ಲೆ ಸುಮಾರು 700 ಅಡಿ ಎತ್ತರದ ಪ್ರದೇಶದಲ್ಲಿರುವುದರಿಂದ ಇವತ್ತಿಗೂ ಕೂಡ ನಮಗೆ ಆಲಮಟ್ಟಿ ಡ್ಯಾಂ ನಿಂದ ಕುಡಿಯುವ ನೀರಿನ ಶಾಶ್ವತವಾದಂಥ ಯೋಜನೆಯನ್ನು ತರುವುದಕ್ಕೆ ಬಹುಶ: ಸಾಧ್ಯವಾಗಿಲ್ಲ. ಆದರೆ ಕೇಂದ್ರ ಸರ್ಕಾರದ ರಾಜೀವ್‌ಗಾಂಧಿ ಸಬ್‌ಮಿಷನ್ ಯೋಜನೆ ಅಡಿಯಲ್ಲಿ ಒಂದು ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆಯನ್ನು ಕೇಂದ್ರ ಸರ್ಕಾರದ ಅಡಿಯಲ್ಲಿ ರಾಜ್ಯ ಸರ್ಕಾರ ಅನುಷ್ಠಾನ ಮಾಡುತ್ತಿದೆ. ಅದರಲ್ಲಿಯೂ ಬಿಜಾಪುರ ಜಿಲ್ಲೆಯ ಫ್ಲೋರೈಡ್ ಕಂಟೆಂಟ್ಸ್ ಅತೀ ಹೆಚ್ಚು ಇರತಕ್ಕಂಥ ಒಂದು ಭಾಗ ಮುದ್ದೇಬಿಹಾಳದ ಮತಕ್ಷೇತ್ರದಲ್ಲಿ ಬರುತ್ತದೆ. ಎರಡನೆಯದಾಗಿ, ನನ್ನ ಮತಕ್ಷೇತ್ರವಾದ ದೇವರ ಹಿಪ್ಪರಗಿ ಬರುತ್ತದೆ. ಅಲ್ಲಿ

ರಾಜೀವ್‌ಗಾಂಧಿ ಸಬ್‌ಮಿಷನ್‌ದಿಂದ ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ ಪ್ಲಾನ್‌ಗಳನ್ನು ಏನು ಮಾಡಿದ್ದಾರೆ, ಅದನ್ನು ಈಗಾಗಲೇ ಸರ್ಕಾರದ ಅನುಮೋದನೆಗಾಗಿ ಸುಮಾರು 9 ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆಯ ಪ್ರಾಜೆಕ್ಟ್ ಸರ್ಕಾರದ ಮುಂದೆ ಇದೆ. ಒಂದು ವರ್ಷದಿಂದ ಅಂದರೆ ಇವತ್ತಿನವರೆಗೂ ಸರ್ಕಾರ ಅದಕ್ಕೆ ಅನುಮೋದನೆಯನ್ನು ಕೊಟ್ಟಿಲ್ಲ. ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ಆಣೆಮಡು ಮತ್ತು 9 ಹಳ್ಳಿಗಳ ಒಂದು ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ ಅದರ ಒಟ್ಟು ಅಂದಾಜಿನ ಒಂದು ಲೆಕ್ಕಾಚಾರವನ್ನು ಕೂಡ ಈಗಾಗಲೇ ಸರ್ಕಾರಕ್ಕೆ ಜಿಲ್ಲಾ ಪಂಚಾಯತಿಯ ವತಿಯಿಂದ ತಮಗೆ ಸಲ್ಲಿಸಲಾಗಿದೆ. ಎರಡನೆಯದಾಗಿ ಅಸ್ಕಿ ಮತ್ತು 6 ಹಳ್ಳಿಗಳು ಮತ್ತು ಮೂರನೆಯದಾಗಿ ಕಲಕೇರಿ ಮತ್ತು 5 ಹಳ್ಳಿಗಳು ಅದೇ ರೀತಿಯಾಗಿ ಜಲನಿರ್ಮಲ ಯೋಜನೆ ಅಡಿಯಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ ಸುಮಾರು ಹಳ್ಳಿಗಳು. ಹೂವಿನ ಹಿಪ್ಪರಗಿ ಮತ್ತು 18 ಹಳ್ಳಿಗಳು ಅದೇ ರೀತಿಯಾಗಿ ಸಿಂಧಗಿ ತಾಲ್ಲೂಕಿನ ನನ್ನ ಮತಕ್ಷೇತ್ರದ ದೇವರ ಹಿಪ್ಪರಗಿ ಮತ್ತು 13 ಹಳ್ಳಿಗಳು ಹೀಗೆ 9 ಮಲ್ಟಿವಿಲೇಜ್ ಸ್ಕೀಂಗಳ ಬಗ್ಗೆ ಈಗಾಗಲೇ ಪ್ಲಾನ್ಸ್‌ನ್ನು ರೆಡಿ ಮಾಡಿ ನಾವು ತಮಗೆ ಸರ್ಕಾರದ ಅನುಮೋದನೆಗಾಗಿ ಒಂದು ವರ್ಷದಿಂದ ಇವತ್ತಿನವರೆಗೂ ನಾವು ಕಾಯುತ್ತಿದ್ದೇವೆ. ಅದಕ್ಕಾಗಿ ನಾನು ಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ, ತುರ್ತಾಗಿ ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದಲೂ ಕೂಡ ಅನೇಕ ಸಾರಿ ನಾವು ಮಾತನಾಡಿದಾಗ ಹೇಳುತ್ತಾರೆ, ಕುಡಿಯುವ ನೀರಿಗೆ ಹಣದ ಕೊರತೆ ಇಲ್ಲವೆನ್ನುವ ಮಾತನ್ನು ತಾವು ಹೇಳುತ್ತೀರಿ. ಆದರೆ ಒಂದು ವರ್ಷದಿಂದ ಈ ಯೋಜನೆಗಳಿಗೆ ಸರ್ಕಾರ ಅನುಮೋದನೆಯನ್ನು ನೀಡಿಲ್ಲ. ದಯಮಾಡಿ ನೀಡಬೇಕು ಎನ್ನತಕ್ಕಂಥದ್ದು ಎಂದು ಒಂದೇ ಒಂದು ಕ್ಲಾರಿಫಿಕೇಶನ್ ತಮ್ಮಿಂದ ಕೇಳಬಯಸುತ್ತೇನೆ. ಇದು ಇಡೀ ಜಿಲ್ಲೆಗೆ ಸಂಬಂಧಪಟ್ಟದ್ದು, ಒಂದು ನಿಮಿಷ ತಾವು ದಯಮಾಡಿ ನನಗೆ ಅವಕಾಶವನ್ನು ಕೊಡಬೇಕು. ಕುಡಿಯುವ ನೀರಿನ ಸಮಸ್ಯೆ ಬಹುಶ: ಬೇಸಿಗೆಯಲ್ಲಿ ನಮ್ಮ ಭಾಗದಲ್ಲಿ ಬಹಳಷ್ಟು ಬರುತ್ತದೆ. ಆದರೆ ಇವತ್ತು ಟಾಸ್ಕ್‌ಫೋರ್ಸ್ ಕಮಿಟಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದೀರಿ. ನಾವು

ಆ ಕಮಿಟಿಯ ಮೀಟಿಂಗ್‌ಗಳನ್ನು ಮಾಡಿದಾಗ ಯಾವ್ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅದಕ್ಕೆ ತಕ್ಷಣ ಹಣದ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡಾಗ ಮತ್ತು ಜಿಲ್ಲಾ ಪಂಚಾಯತಿಗೆ ಮನವಿ ಮಾಡಿಕೊಂಡಾಗ ಇವತ್ತು ಅವರಿಂದ ಉತ್ತರ ಬರುತ್ತಿರುವುದು ಒಂದೆ, ಇಲ್ಲಿ ಹಣ ಇಲ್ಲ. ಸರ್ಕಾರದಿಂದ ಇನ್ನು ಮಂಜೂರಾತಿ ಹಣ ಬಂದಿಲ್ಲ, ಹಣ ಬರುವವರೆಗೆ ನಾವು ಏನು ಮಾಡುವುದಕ್ಕಾಗುವುದಿಲ್ಲವೆನ್ನುವ ಒಂದು ನಕಾರಾತ್ಮಕ ಉತ್ತರವನ್ನು ಇವತ್ತು ನಾವು ಜಿಲ್ಲಾಡಳಿತದಿಂದ ಪಡೆಯುತ್ತಿದ್ದೇವೆ. ಅದಕ್ಕೆ ಈಗಾಗಲೇ ನನ್ನ ಕ್ಷೇತ್ರದಲ್ಲಿ ವಿಶೇಷವಾಗಿ 114 ಹಳ್ಳಿಗಳು ಬರತಕ್ಕಂಥ ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ ಇವತ್ತಿಗೂ ಕೂಡ permanent ಆಗಿ ಯಾವುದೇ ಮಲ್ಟಿವಿಲೇಜ್ ಸ್ಕೀಂ ಆಗಲಿ ಇನ್ನಾವುದೇ ಸ್ಕೀಂ ಇಂಪ್ಲಿಮೆಂಟ್ ಆಗಲಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 19 ಹಳ್ಳಿಗಳು ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಕೊಡಬೇಕಾದಂಥ ಒಂದು ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಮಾನ್ಯ ಸಚಿವರು ಗಮನವನ್ನು ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮೂರನೆಯದಾಗಿ ಹೇಳುವುದಾದರೆ ಬಿಜಾಪುರ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳು ಹಾಗೂ ಹೈಸ್ಕೂಲ್‌ಗಳು ಇವೆ. ಹಿರಿಯ ಪ್ರಾಥಮಿಕ ಶಾಲೆಗಳು ಇವೆ. ಇಡೀ ಜಿಲ್ಲೆಯಲ್ಲಿ ಬರತಕ್ಕಂತಹ ಒಟ್ಟು ಶಾಲೆಗಳು ....

ಅಧ್ಯಕ್ಷರು : ಇದು clarification ಆಗುವುದಿಲ್ಲ.

ಶ್ರೀ ಎ.ಎಸ್. ಪಾಟೀಲ್: ಗ್ರಾಮೀಣ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಹೇಳುವುದಾದರೆ, ಇದು drinking water scheme ಸಾರ್. ಇಡೀ ಬಿಜಾಪುರ ಜಿಲ್ಲೆಯಲ್ಲಿ ಇವತ್ತಿಗೂ ಕೂಡ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುತ್ತಿರುವಂಥ 207 ಕಿರಿಯ ಪ್ರಾಥಮಿಕ ಶಾಲೆಗಳು ಇವೆ. 365 ಕಿರಿಯ ಪ್ರಾಥಮಿಕ ಶಾಲೆಗಳು ಇವೆ.

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ವಿವರಣೆಯನ್ನು ಹೇಳುವುದು ಬೇಡ.

1.10 ಪಿ.ಎಂ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : 19 ಪ್ರೌಢಶಾಲೆಗಳು, 5 ಪದವಿ ಪೂರ್ವ ಶಾಲೆಗಳು ಹೀಗೆ ಒಟ್ಟು 614 ಕುಡಿಯುವ ನೀರಿನ ಸೌಲಭ್ಯವಿಲ್ಲದಂತಹ ಶಾಲೆಗಳನ್ನು ಗುರುತಿಸಿ ಸುಮಾರು 5 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಈಗಾಗಲೇ ಸರ್ಕಾರಕ್ಕೆ ಮಂಜೂರಾತಿಗೆ ಕಳುಹಿಸಲಾಗಿದೆ. ಆದರೆ ಇವತ್ತಿಗೂ ಕೂಡ ಅದಕ್ಕೆ ಸರ್ಕಾರವು ಮಂಜೂರಾತಿಯನ್ನು ಕೊಟ್ಟಿರುವುದಿಲ್ಲ. ಈ ದಿಸೆಯಲ್ಲಿ ಇವತ್ತು ಜಿಲ್ಲಾ ಮಂತ್ರಿಗಳು ಕೂಡ ನಮಗೆ ಜಿಲ್ಲಾ ಪಂಚಾಯಿತಿಯ ಒಂದು ಮನವಿಯನ್ನು ಸಲ್ಲಿಸಲಾಗಿದೆ.

ಅಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿ. ಯಾರೂ ಕೂಡ ಮಧ್ಯದಲ್ಲಿ ಎದ್ದು ನಿಂತುಕೊಂಡು ಮಾತನಾಡಬಾರದು. ಈಗ ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಎತ್ತಿದ್ದೀರಿ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ನಾನು ಇನ್ನೊಂದು clarification ಕೇಳುತ್ತೇನೆ. ಅದು ಕೇಳಿದ ನಂತರ ತಾವು ಉತ್ತರವನ್ನು ಕೊಡಬೇಕು. ಈಗಾಗಲೇ ಜಿಲ್ಲಾ ಪಂಚಾಯಿತಿಯಿಂದ ತಮಗೆ ಈಗಾಗಲೆ plansನ್ನು ರೆಡಿಮಾಡಿ ಮಂಜೂರಾತಿಗೋಸ್ಕರವಾಗಿ ಜಿಲ್ಲಾ ಪಂಚಾಯಿತಿಯಿಂದ ಈ ಬಗ್ಗೆ ಬಹಳ ಸಾರಿ ಒತ್ತಾಯ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿಯಲ್ಲಿ ಬಹುಮತದಿಂದ ಅಲ್ಲಿರತಕ್ಕಂತಹ .....

ಅಧ್ಯಕ್ಷರು : ತಾವು ಜಿಲ್ಲಾ ಪಂಚಾಯಿತಿಯ ಬಗ್ಗೆ ಹೇಳಿದ್ದೀರಲ್ಲಾ ಅಷ್ಟು ಸಾಕು.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಅದಕ್ಕೆ ಬೇಕಾಗಿರತಕ್ಕಂತಹ ಹಣ ಸುಮಾರು.....

ಅಧ್ಯಕ್ಷರು : ನೀವು ಮತ್ತೇ ಮತ್ತೇ ಜಿಲ್ಲಾ ಪಂಚಾಯಿತಿಯ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : 772.35 ಲಕ್ಷ ರೂಪಾಯಿಗಳು ಹಣವನ್ನು ತಕ್ಷಣ ಸರ್ಕಾರವು ಬಿಡುಗಡೆ ಮಾಡಬೇಕು. ಇಲ್ಲದೆ ಹೋದರೆ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯು ಉಲ್ಬಣವಾಗುತ್ತದೆ ಎಂಬುದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದಂತಹ ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿಯವರು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ಯೋಜನೆಗಳ ವಿಷಯಗಳನ್ನು ಇಲ್ಲಿ ಅವರು ಕೆಲವೊಂದು ಸ್ಪಷ್ಟೀಕರಣವನ್ನು ಕೇಳಿದ್ದಾರೆ. ಈಗಾಗಲೇ ನಾನು ನನ್ನ ಉತ್ತರದಲ್ಲಿ ಸಾಕಷ್ಟು ವಿವರವಾಗಿ ಯಾವ ಯಾವ ಯೋಜನೆಗಳು ಈಗಾಗಲೇ ಮಂಜೂರಾಗಿದೆ, ಯಾವ ಯೋಜನೆಗಳು ಪ್ರಾರಂಭವಾಗಿವೆ, ಯಾವುದು ಮುಕ್ತಾಯದ ಹಂತದಲ್ಲಿದೆ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಈ ಒಂದು ಕೇಂದ್ರ ಸರ್ಕಾರದ Submission ಯೋಜನೆಯಲ್ಲಿ ಕೆಲವೊಂದು ಯೋಜನೆಗಳು ಈಗಾಗಲೇ ಚಾಲ್ತಿಯಲ್ಲಿದೆ, ಅವು almost ಮುಕ್ತಾಯದ ಹಂತಕ್ಕೆ ಬಂದಿದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಇನ್ನು ಅಂದಾಜು 57 ಕೋಟಿ ರೂಪಾಯಿಗಳದು 10 ಯೋಜನೆಗಳಿಗೆ ಅನುಮೋದನೆ ದೊರೆತಿದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಅವು ಇನ್ನು ಪ್ರಾರಂಭವಾಗುತ್ತದೆ. ಈಗ ಏನು ಮಾನ್ಯ ಸದಸ್ಯರು ಈ 9 ಯೋಜನೆಗಳು ರಾಜ್ಯ ಮಟ್ಟದಲ್ಲಿ ಇವತ್ತು ಪೆಂಡಿಂಗ್ ಇದೆ ಎನ್ನುವಂತಹ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೆ ನಾನು ಆ ಬಗ್ಗೆ ತಕ್ಷಣ ಎಲ್ಲಾ ಫೈಲ್‌ಗಳನ್ನು ತರಿಸಿ ಈ 9 ಯೋಜನೆಗಳದು ಅಂದರೆ Submission ಯೋಜನೆಯಲ್ಲಿ ಏನು ಪೆಂಡಿಂಗ್ ಇವೆ, ಇದರ ಬಗ್ಗೆ ಆದಷ್ಟು ಬೇಗನೆ ಆ ಯೋಜನೆಗಳನ್ನು ಮಂಜೂರು ಮಾಡಿಸುವಂತಹ ಕೆಲಸವನ್ನು

ನಾನು ಮಾಡುತ್ತೇನೆ. ಇದರ ಜೊತೆಗೆ ವಿದೇಶಿ ನೆರವಿನ ಯೋಜನೆಯಡಿಯಲ್ಲಿ 53 ಕೋಟಿ ರೂಪಾಯಿಯ ಅಂದಾಜು ವೆಚ್ಚದಲ್ಲಿ 101 ಸಮಸ್ಯಾತ್ಮಕ ಗ್ರಾಮಗಳ ಬಗ್ಗೆಯೂ ಕೂಡ ಇವತ್ತು ಯೋಜನೆಗಳು ಬರುತ್ತಿದೆ. ಅಷ್ಟೇ ಅಲ್ಲ ಈಗ ನನಗೆ particular ಆಗಿ ಕೆಲವೊಂದು ಗ್ರಾಮಗಳ ಮತ್ತು ಸಿಂಧಗಿ, ಬಸವನಬಾಗೇವಾಡಿ ಇನ್ನಿತರ ಹಲವಾರು ಅದರಲ್ಲಿ ಫ್ಲೋರೈಡ್ ಇರುವಂತಹ ನೀರಿನ ಸಮಸ್ಯೆಗಳ ಇರುವಂತಹ ಗ್ರಾಮಗಳ ಬಗ್ಗೆ ಮಾನ್ಯ ಸದಸ್ಯರು ಏನು ನನ್ನ ಗಮನಕ್ಕೆ ತಂದಿದ್ದಾರೆ, ಬಹುಶ: ನನಗನಿಸಿದ ಮಟ್ಟಿಗೆ ಆ 10 ಯೋಜನೆಗಳು ಏನು ಪೆಂಡಿಂಗ್ ಇವೆ ಎಂದು ಅವರು ಹೇಳಿದ್ದಾರೆ, ಅದರಲ್ಲಿ ಇವೆಲ್ಲವೂ ಬರುವಂತಹದ್ದು ಆಗುತ್ತದೆ. ಇನ್ನು ಹಲವಾರು ಮುಂದಿನ ಕುಡಿಯುವ ನೀರಿನ ಯೋಜನೆಗಳು ಬರುತ್ತವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿ ಇದಕ್ಕೆ ಸಾಕಷ್ಟು ಹಣ ಇದೆ. ಕುಡಿಯುವ ನೀರಿಗೆ ಯಾವುದೇ ರೀತಿಯಿಂದಲೂ ತೊಂದರೆಯಾಗದ ರೀತಿಯಲ್ಲಿ ನಾವು ಸರ್ಕಾರವು ಕ್ರಮವನ್ನು ಕೈಗೊಳ್ಳುತ್ತದೆ. ಈಗ ಏನು ಬೇಸಿಗೆ ಬರುವಂತಹ ಸಂದರ್ಭದಲ್ಲಿ ಈಗಾಗಲೇ ನಾನು ಎಲ್ಲಾ ಸಿಇಒಗಳ ಸಭೆಯನ್ನು ಬೆಂಗಳೂರಿನಲ್ಲಿ ಕರೆದಿದ್ದೇನೆ. ಆ ಸಂದರ್ಭದಲ್ಲಿ ಸಹಿತ ಎಲ್ಲಾ ಸಿಇಒಗಳಿಗೂ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಈ ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆಯ ಸಂದರ್ಭದಲ್ಲಿ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯು ಉಂಟಾಗುತ್ತದೆ. ಅದರ ಬಗ್ಗೆ ತಕ್ಷಣ ಕ್ರಮವನ್ನು ಕೈಗೊಳ್ಳುವ ಬಗ್ಗೆ ಪ್ಲಾನ್‌ಗಳನ್ನು ನೀವು ರೆಡಿ ಮಾಡಬೇಕೆಂಬ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಆ ಪ್ರಪೋಸಲ್‌ನ್ನು ತೆಗೆದುಕೊಂಡು ಅದಕ್ಕೆ ತಕ್ಷಣ ಯಾವ ರೀತಿಯಾಗಿ ನಾವು ಸ್ಪಂದನೆ ಮಾಡಬೇಕೆಂಬುದರ ಬಗ್ಗೆ ರಾಜ್ಯ ಸರ್ಕಾರವು ಕ್ರಮವನ್ನು ಕೈಗೊಳ್ಳುತ್ತದೆ. ಇದು ಅಷ್ಟೇ ಅಲ್ಲ, ಇವತ್ತು ಶಾಸಕರ ಅಧ್ಯಕ್ಷತೆಯಲ್ಲಿ ಇರುವಂತಹ ಟಾಸ್ಕ್‌ಫೋರ್ಸ್ ಕಮಿಟಿ ಏನು ಇದೆ, ಮತ್ತೇ ಅದನ್ನು existenceಗೆ ತೆಗೆದುಕೊಂಡು ಬಂದು ಅದು ಚಾಲ್ತಿಯಲ್ಲಿದೆ, ಅದಕ್ಕೆ ಹಣವನ್ನು ಕೊಟ್ಟು ಅದರ ಮುಖಾಂತರ ಎಲ್ಲಿ ತುರ್ತಾಗಿ ಇವತ್ತು ಪರಿಹಾರ

ಕ್ರಮಗಳನ್ನು ಕೈಗೊಳ್ಳಬೇಕು, ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕು, ಆ Taskforce Committee ಮುಖಾಂತರ ಚಾಲನೆಯನ್ನು ಕೊಡುತ್ತೇವೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಈ ರೀತಿಯಾಗಿ ಬೇಸಿಗೆಯ ಸಂದರ್ಭದಲ್ಲಿ ಇವತ್ತು taskforce committeeಗೆ ನಾವು ಹೆಚ್ಚು ಅಧಿಕಾರವನ್ನು ಕೊಟ್ಟು ಅದರ ಮುಖಾಂತರ ಎಲ್ಲಿ emergency ಆಗಿ ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ, ಅದನ್ನು attend ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳುವ ಬಗ್ಗೆ ನಾವು ಒಂದು ಕ್ರಮವನ್ನು ಕೈಗೊಳ್ಳುತ್ತೇವೆ. ನಮ್ಮ ಇಲಾಖೆಯು ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತದೆ. ಕುಡಿಯುವ ನೀರಿನ ಯೋಜನೆಯಡಿಯಲ್ಲಿ, ಇವತ್ತು ರಸ್ತೆ ನಿರ್ಮಾಣ ಇರಬಹುದು, ಮೂಲಭೂತ ಸೌಕರ್ಯ ಇರಬಹುದು, ಅದಕ್ಕಿಂತ ಹೆಚ್ಚು ಆದ್ಯತೆಯನ್ನು ಇವತ್ತು ನಾವು ಕುಡಿಯುವ ನೀರಿಗಾಗಿ ಕೊಡಬೇಕಾಗುತ್ತದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಅದಕ್ಕೆ ನಮ್ಮ ಇಲಾಖೆ ಹಾಗೂ ನಮ್ಮ ಸರ್ಕಾರ ಅದಕ್ಕೆ ಆದ್ಯತೆಯನ್ನು ಕೊಡುತ್ತದೆ. ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ನೀವು ಏನು ವಿಷಯವನ್ನು ಕೇಳಿದ್ದೀರಿ, ಅದು ಸಂಪೂರ್ಣವಾಗಿ ಆಗುತ್ತದೆ. ಬಹಳಷ್ಟು ಯೋಜನೆಗಳು ಮಂಜೂರಾಗುವಂತಹ ಹಂತದಲ್ಲಿದೆ. ನಾವು ಎಲ್ಲಕ್ಕೂ ಆದ್ಯತೆಯನ್ನು ಕೊಡುತ್ತೇವೆನ್ನುವಂತಹ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಎಂ.ಪಿ.ಕುಮಾರಸ್ವಾಮಿಯವರೆ, ತಾವು ಮಾತನಾಡಿ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ,....

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಗ್ರಾಮೀಣಾಭಿವೃದ್ಧ ಸಚಿವರಿಗೆ ನಿಮ್ಮ ಮೂಲಕ ಕೇಳುತ್ತೇನೆ. ಕುಡಿಯವ ನೀರಿನ ಸಮಸ್ಯೆಯು ಎಲ್ಲಾ ಕಡೆಯಲ್ಲಿ ದೊಡ್ಡ ಸಮಸ್ಯೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹಾಗೂ ಪಟ್ಟಣ ಪ್ರದೇಶದಲ್ಲಿಯೂ ಕೂಡ ಆಗಿದೆ. ಇದರ ಬಗ್ಗೆ ನಾನು ನಿನ್ನೆಯ ದಿನ ಪಸ್ತಾಪ ಮಾಡಿದ್ದೇನೆ. ಅದಕ್ಕೆ ಮಾನ್ಯ

ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಇದಕ್ಕೆ ವಿದ್ಯುತ್ ಸಮಸ್ಯೆಯು ಕೂಡ ಇದಕ್ಕೆ ಬಹಳ ಪ್ರಾಮುಖ್ಯವಾದ ಕಾರಣವಾಗಿದೆ. ಹಳ್ಳಿಗಾಡಿನಲ್ಲಿ 3 ರಿಂದ 4 ಗಂಟೆಗಳ ಕಾಲ ವಿದ್ಯುತ್ ಇಲ್ಲದೆ ಇರುವುದರಿಂದ ಕುಡಿಯುವ ನೀರಿನದು ದೊಡ್ಡ ಸಮಸ್ಯೆಯಾಗಿದೆ. ಇವತ್ತು ಅನೇಕ ಜನರು calling attention ನಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಈಗಾಗಲೇ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ನೀವು war footingನಲ್ಲಿ... ಈ ಕೆಲಸಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೆ, ತಾವು ಆದ್ಯತೆಯ ಮೇಲೆ ಮಾಡುತ್ತೇನೆಂದರೆ ಅದು ಆಗುವುದಿಲ್ಲ. ನಾವು ಈಗಾಗಲೇ ಮಾರ್ಚಿ ತಿಂಗಳಲ್ಲಿ ಇದ್ದೇವೆ. ಮಾರ್ಚ್, ಏಪ್ರಿಲ್, ಮೇ ಈ ಮೂರು ತಿಂಗಳು ಬಹಳ ಸಮಸ್ಯೆ ಆಗುತ್ತದೆ. ಈಗಾಗಲೇ start ಆಗಿದೆ. ನೀವು ಇನ್ನು plan ಮಾಡುತ್ತೇವೆ, ಹಣಕಾಸಿನ ಇಲಾಖೆಯವರನ್ನು ಕೇಳುತ್ತೇವೆ, ಹಣಕಾಸಿನ ಇಲಾಖೆಯವರು ಕೊಟ್ಟರೆ ಮಾಡುತ್ತೇವೆ. ನಿಮ್ಮ ಇಲಾಖೆಯಲ್ಲಿ ತತ್‌ಕ್ಷಣಕ್ಕೆ ಏನಾದರೂ ಸಹಾಯ ಮಾಡುವುದಕ್ಕೆ ಒಂದು ರೂಪಾಯಿ ಇಲ್ಲ. ನಿಮ್ಮ ಸಿಇಒ ಹತ್ತಿರವೂ ಇಲ್ಲ, ಡಿ.ಸಿ.ಯವರ ಹತ್ತಿರವೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಇಲಾಖೆಯಲ್ಲಿ ಸಮಸ್ಯೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಅದು ಇಲ್ಲ.

ಶ್ರೀ ಸಿದ್ದರಾಮಯ್ಯ : ನಮ್ಮ ಇಲಾಖೆಯದು ಎಂದಲ್ಲಿ, ಇದನ್ನು war footing ನಲ್ಲಿ ತೆಗೆದುಕೊಳ್ಳುವಂತಹದ್ದು. ಅದಕ್ಕಾಗಿ ಡಿ.ಸಿ.ಯವರ ಹತ್ತಿರ ಹಣವಿಲ್ಲ ಎಂದು ಹೇಳುವುದು ಸರಿಯಲ್ಲ. ಡಿ.ಸಿ.ಯವರ ಹತ್ತಿರ ಹಣವಿದೆ. Emergency ಬಂದಾಗ ಅವರು war foot ಮೇಲೆ ಕುಡಿಯುವ ನೀರಿನ ಸಮಸ್ಯೆ ಬಂದಾಗ ಕ್ರಮವನ್ನು ಕೈಗೊಳ್ಳುತ್ತಾರೆ. ಡಿ.ಸಿ.ಯವರ ಹತ್ತಿರ ಹಣ ಇದ್ದೇ ಇರುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮಂತ್ರಿಯವರೆ, ತಾವು ಸ್ವಲ್ಪ ನನ್ನ ಮಾತನ್ನು ಕೇಳುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ : ಬೋರ್‌ವೆಲ್ ಕೊರೆಯುವುದಕ್ಕೆ ಹಣ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಮೇಲೆ allegation ಮಾಡುತ್ತಿಲ್ಲ ಹಾಗೂ ನಿಂದನೆಯನ್ನು ಮಾಡುತ್ತಿಲ್ಲ. ನಾನು ಜಿಲ್ಲಾಧಿಕಾರಿಗಳ ಜೊತೆ ಹಾಗೂ ಸಿಇಒರವರ ಜೊತೆಯಲ್ಲಿ ಜಾಯಿಂಟಾಗಿ ಮೀಟಿಂಗ್ ಮಾಡಿ ಹೇಳುತ್ತಿದ್ದೇನೆ. ಅವರ ಜೊತೆಯಲ್ಲಿ ನಾನು ಚರ್ಚೆ ಮಾಡಿ ಹೇಳುತ್ತಿದ್ದೇನೆ. ಮೈಸೂರಿನ ಡಿ.ಸಿ. ಹಾಗೂ ಸಿ.ಇ.ಒ., ಆಮೇಲೆ ಚಾಮರಾಜನಗರ ಜಿಲ್ಲೆಯ ಡಿ.ಸಿ. ಹಾಗೂ ಸಿ.ಇ.ಒ. ಇವರಿಬ್ಬರ ಜೊತೆಯಲ್ಲಿ ಮಾತನಾಡಿ ಹೇಳುತ್ತಿದ್ದೇನೆ. ನಿಮಗೆ ಸಿಆರ್ಎಫ್ ಫಂಡ್‌ನಲ್ಲಿಯೂ ಅವರಿಗೆ ಕೊಡುವುದಕ್ಕೆ ಹಣವಿಲ್ಲ. ಕುಡಿಯುವ ನೀರಿಗೆ ಕೊಡುವುದಕ್ಕೆ ಅವರ ಹತ್ತಿರ ಹಣವಿಲ್ಲವೆಂದು ಅವರೇ ಹೇಳಿದ್ದಾರೆ. ಈಗ ಹೊಸದಾಗಿ ಒಂದು ಬೋರ್‌ವೆಲ್ ತೋಡಿಸಬೇಕಾದರೂ ಕೂಡ ತಕ್ಷಣ ಅವರ ಹತ್ತಿರ ಒಂದು ರೂಪಾಯಿಯೂ ಕೂಡ ಇಲ್ಲ. ನಾನು ಏನು ಹೇಳುತ್ತೇನೆ ಅದಕೋಸ್ಕರ .....

ಶ್ರೀ ಹೆಚ್.ಹಾಲಪ್ಪ : ಚಾಮರಾಜನಗರದ ಡಿ.ಸಿ.ಯವರ ಹತ್ತಿರ ಹಣ ಇದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಚಿವರೆ, ಇಲ್ಲಾ ಸ್ವಾಮಿ, ತಾವು ಕುಳಿತುಕೊಳ್ಳಿ. ನೀವು ಅಲ್ಲಿಗೆ ಹೋಗಿ ಒಂದು ಬೋರ್‌ವೆಲ್‌ನ್ನು ಹೊಸದಾಗಿ ತೋಡಿಸುವುದಕ್ಕೆ ಅವರಿಗೆ ಹೇಳಿ ನೋಡಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಸಿ.ಇ.ಒ.ಗಳಿಗೆ ಎಷ್ಟು ಕುಡಿಯುವ ನೀರಿಗೆ ಹಣ ಬೇಕಾಗುತ್ತದೆ, ಅಲ್ಲಿ ಎಂಎಲ್ಎಗಳ ಅಧ್ಯಕ್ಷತೆಯಲ್ಲಿ Taskforceಗಳು ಇವೆ, ಅದಕ್ಕೆ ಕೂಡಲೇ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಬೇಕು. ಇಲ್ಲದೆ ಹೋದರೆ ದೊಡ್ಡ ಸಮಸ್ಯೆಯು ಹಳ್ಳಿಗಾಡಿನಲ್ಲಿ ನಿರ್ಮಾಣವಾಗುತ್ತದೆ. ಈಗಾಗಲೇ ಅನೇಕ ಕಡೆಗಳಲ್ಲಿ ಜನರು ಇವತ್ತು ಬಿಂದಿಗೆ ಹಿಡಿದುಕೊಂಡು ಬೀದಿಗೆ ಬಂದಿದ್ದಾರೆ. ತಾವು ದಯವಿಟ್ಟು ಆ ಕೆಲಸವನ್ನು ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಚಾರಗಳನ್ನು ಹೇಳಿದ್ದಾರೆ. ಇದಕ್ಕೆ ನಮ್ಮದು ಆದ್ಯತೆ ಇದೆ. ನಾವು

war foot ಮೇಲೆ ಈ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ ಹಿಂದೇಟು ಹಾಕುವಂತಹ ಪ್ರಶ್ನೆ ಇಲ್ಲ. ಆ Taskforce Committeeಗೆ ಹೆಚ್ಚಿನ ಹಣವನ್ನು ಕೊಡುವಂತಹದ್ದರ ಬಗ್ಗೆ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಇ) **ವಿಷಯ:** ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯ ರಮಣದುರ್ಗದಲ್ಲಿ ಬ್ಲಾಕ್ 13ರ ಶೇಕಡ 50ರಷ್ಟು ಪ್ರದೇಶವನ್ನು ಗಣಿಗುತ್ತಿಗೆಗೆ ಕಾಯ್ದಿರಿಸಿದ್ದರೂ ಪರ್ಯಾಯ ಗಣಿಗಾರಿಕೆಗೆ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) : ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯ ರಮಣದುರ್ಗದಲ್ಲಿ ಬ್ಲಾಕ್ 13 ರ ಶೇಕಡ 50 ರಷ್ಟು ಪ್ರದೇಶವನ್ನು ಗಣಿ ಗುತ್ತಿಗೆಗೆ ಕಾಯ್ದಿರಿಸಿದ್ದರೂ, ಪರ್ಯಾಯ ಗಣಿಗಾರಿಕೆಗೆ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೇ, "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎ 33 ಎಂಎಂಎಂ 94, ದಿನಾಂಕ: 17.2.2003 ರಲ್ಲಿ ರಾಜ್ಯ ಸರ್ಕಾರ ಹಿಂದೆ ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆಗಳು ಮೀಸಲಿಟ್ಟಿದ್ದ 11,620.56 ಚದರ ಕಿಲೋ ಮೀಟರ್ ಪ್ರದೇಶವನ್ನು ಸಾರ್ವಜನಿಕರಿಗೆ ಗಣಿಗಾರಿಕೆಗೆ ನೀಡುವ ಸಲುವಾಗಿ de–reserve ಮಾಡಲಾಗಿತ್ತು. ನಂತರ ದಿನಾಂಕ: 15.3.2003ರ ಸರ್ಕಾರದ ಅಧಿಸೂಚನೆಯಲ್ಲಿ de–reserve ಮಾಡಲಾದ ಪ್ರದೇಶಗಳಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ರೀತಿ de–reserve ಮಾಡಲಾದ ಪ್ರದೇಶಗಳ ಪೈಕಿ ಬ್ಲಾಕ್ ನಂ. 13/1 ರಲ್ಲಿನ ಶೇಕಡ 50 ರಷ್ಟು ಪ್ರದೇಶವನ್ನು ಮೆಸರ್ಸ್ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ಕಾಯ್ದಿರಿಸಲು 2005ರಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಈ ಅಧಿಸೂಚನೆ ಕುರಿತಂತೆ ಮಾನ್ಯ